ರೈತರೂ ಸಹ ಅವರ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ಅವರೂ ಸಹ ಸಣ್ಣ ಸಣ್ಣ ಕೆರೆಗಳನ್ನು ನರಿಯಾಗಿ ಇಟ್ಟುಕೊಳ್ಳಬೇಕು ಎಂದು ಸರ್ಕಾರದವರು ಸಲಹೆ ಕೊಟ್ಟಿದ್ದಾರೆ.

ಶ್ರೀ ಕೆ. ವಿ. ಬೈರೇಗೌಡ.—ಕೆರೆಗಳನ್ನು ದುರಸ್ತು ಮಾಡಿ ನರಿಯಾದ ಸ್ಥಿತಿಯಲ್ಲಿಡುವುದು P.W.D.ಯವರ ಕರ್ತವ್ಯವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಅವರೂ ಸಹ ಸಾಧ್ಯವಾದಷ್ಟು ಮಾಡುತ್ತಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಸಣ್ಣ ಸಣ್ಣ ಕೆರೆಗಳ ತೂಬನ್ನು ರಿಪೇರಿಮಾಡಲು ಏನಾದರೂ ನೀತಿಯನ್ನು ಅನುಸರಿಸುತ್ತಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು, ಆದರೆ ತಮ್ಮ ತಾಲ್ಲೂಕಿನಲ್ಲಿ ಬೇಕಾದಷ್ಟು ಕಾಮಗಾರಿಗಳು ನಡೆದಿವೆ.

Unauthorised constructions of houses round about Bangalore.

Q.—415. Sri K. V. BYRE GOWDA (Bangalore North).—

Will the Government be pleased to state:—

(*a*) the action that is being taken to prevent the unauthorised construction of houses round about Bangalore (Belt Area);

(*b*) whether the unauthorised constructions have been regularised:

(*c*) the amount of fines so far collected in respect of such unauthorised constructions and the probable amount of conversion fines that may be recovered in respect of these constructions?

A.—(*a*) Sri Kadidal MANJAPPA (Minister for Revenue and Public Works).—A special staff has been appointed for the purpose and action is being taken to prevent unauthorised constructions in the Belt Aera.

(*b*) Not yet.

(*c*) Amount collected

Rs. 2,42,806-12-6.

Probable amount that may be recovered Rs. 5,91,265-13-0.

ಶ್ರೀ ಕೆ. ವಿ. ಬೈರೇಗೌಡ.—ಬೆಂಗಳೂರು ಸುತ್ತ ಮುತ್ತಲೂ unauthorised construction ಆಗುತ್ತಿರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಅದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಕೆ. ವಿ. ಬೈರೇಗೌಡ.—ಇಂತಹ ಅನೇಕ slum ಗಳಿಂದ ಅಲ್ಲಿನ ಜನರಿಗೆ ಅನಾರೋಗ್ಯವುಂಟಾಗಿ ಸಾಂಕ್ರಾಮಿಕ ರೋಗಗಳು ಹರಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಂಕ್ರಾಮಿಕ ರೋಗಗಳು ಹರಡದಂತೆ ನೋಡಿಕೊಳ್ಳುವುದಕ್ಕಾಗಿ ವಿಶೇಷ ರೀತಿಯ ಸಿಬ್ಬಂದಿಯನ್ನು ನೇಮಕಮಾಡಲಾಗಿದೆ.

ಶ್ರೀ ಕೆ. ವಿ. ಬೈರೇಗೌಡ.—ಕೆಲವು ಕಡೆಗಳಲ್ಲಿ special staff ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲೆಲ್ಲಿ ಯಾರು ಅನಧಿಕೃತವಾಗಿ ಮನೆಗಳನ್ನು ಕಟ್ಟುತ್ತಿದ್ದಾರೋ ಅವರನ್ನೆಲ್ಲಾ quit ಮಾಡಿಸಿ, ಅಕ್ರಮವಾಗಿ ಮನೆಗಳನ್ನು ಕಟ್ಟಿದ್ದರೆ, ಅವರಿಂದ conversion fine ವಸೂಲುಮಾಡಿ, ಅವರ ಮೇಲೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ.

1 P.M.

ಶ್ರೀ ಕೆ. ವಿ. ಬೈರೇಗೌಡ.—Unauthorised constructionsಬರಿಯ ಬೆಲ್ಟ್ ಪ್ರದೇಶದಲ್ಲೇ ಅಲ್ಲ, ಬೆಂಗಳೂರು ನಗರದ ಮಧ್ಯೆ ಕೂಡ ಇದೆ. ಇವುಗಳ ಸಂಬಂಧವಾಗಿ ಯಾವ ರೀತಿ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಕಟ್ಟಿರುವುದನ್ನು ಮಂಜೂರುಮಾಡಬೇಕೆಂದು ತಾವು ಕೇಳುವುದಾದರೆ, ಆ ರೀತಿ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ತಡೆಮಾಡುತ್ತೀರೋ ಅಥವಾ ಇನ್ನೇನಾದರೂ ಮಾಡುತ್ತೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಕಟ್ಟಿದವರ ಮೇಲೆ ರೆವಿನ್ಯೂ ಕೇಸ್ ಹಾಕುತ್ತಾರೆ.

R. C. C. Tank under construction at Davangere.

Q.—642. Sm. BELLARY SIDDAMMA (Davangere).—

Will the Government be pleased to state:—

(*a*) the reason as to why the work of the new R.C.C. Tank under construction at Davangere City is not expedited and completed early though the present supply of water in the city has been badly affected;

(*b*) whether they have not taken the responsibility of the said tank work?

A.— Sri Kadidal MANJAPPA (Minister for Revenue and Public Works).—

(*a*) The work was being executed by the Municipality till February 1955, from which date the P.W.D. took it over. It took some time for the connected records to be handed over to the P.W.D. and the balance claims of the previous contractor could only be settled by May 1955. Since then fresh tenders were called for, for the balance work and tender has also been approved. It will be executed as expeditiously as possible.

(*b*) The P.W.D. is now in charge of the work.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ದಾವಣಗೆರೆ ನಗರದಲ್ಲಿ ಒಂದೇ ಕೆರೆಯಿಂದ ನೀರು ಸರಬರಾಯಿ ಸಾಲದೇ ಯಿರುವುದು ಎಷ್ಟು ವರ್ಷದಿಂದ ?

ಶ್ರೀ ಕಡಿದಾಳ್ ಮಂಜಪ್ಪ.—1951ನೆಯ ಇಸವಿಯಿಂದ ಸರ್ಕಾರದ ಗಮನದಲ್ಲಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಇಷ್ಟು ವರ್ಷವಾದರೂ ಇನ್ನು ಮುಂದೆ ಜಾಗ್ರತೆ ಮಾಡುತ್ತೇವೆಂದು ಹೇಳುತ್ತೀರಿ, ಎಷ್ಟು ವರ್ಷದಲ್ಲಿ ಮುಗಿಸುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಕೆಲಸ ಸರ್ಕಾರದ ವಶಕ್ಕೆ ಬಂದುದು ಕಳೆದ ವರ್ಷ ಫೆಬ್ರವರಿಯಲ್ಲಿ; ಅಲ್ಲಿಂದೀಚೆಗೆ ನಮ್ಮ ಸುಪರ್ದಿಗೆ ತೆಗೆದುಕೊಂಡುಮಾಡುತ್ತಿರುವುದು.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಪೂರ್ತಿಮಾಡಲು ಎಷ್ಟು ದಿವಸ ಹಿಡಿಯಬಹುದು ?

ಶ್ರೀ ಕಡಿದಾಳ್ ಮಂಜಪ್ಪ.—ಟೆಂಡರನ್ನು ಒಪ್ಪಿದ್ದೇವೆ, ಕೆಲಸ ನಡೆಯುತ್ತಿದೆ, ಇಷ್ಟೇ ದಿವಸ ಎಂದು ಹೇಗೆ ಹೇಳುವುದು ?

Amrit Mahal Kaval in Bangalore District released for cultivation.

Q.—663. **Sri D. M. GOVINDARAJU** (Nelamangala).—

Will the Government be pleased to state :—

(*a*) the extent of Amrit Mahal Kaval released for granting lands to the poor people in Bangalore district ;

(*b*) the extent of land granted so far to the poor people ;

(*c*) the extent of land remaining at present for being granted ?

A.—**Kadidal MANJAPPA** (Minister for Revenue and Public Works):—

	A.	*G.*
(*a*)	767	25
(*b*)	493	3

(*c*) Nil, since the remaining extent has been reserved as hulbanni.

ಶ್ರೀ ಡಿ. ಎಂ. ಗೋವಿಂದರಾಜು.—767 ಎಕರೆ, 25 ಗುಂಟೆ ಜಮೀನನ್ನು ರಿಲೀಸ್‌ಮಾಡಿರುವುದು ಯಾವ ಉದ್ದೇಶದಿಂದ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಗುವಳಿಗೆ ಕೊಡುವುದಕ್ಕೆ ಮತ್ತು ಸಾರ್ವಜನಿಕ ಉಪಯೋಗಕ್ಕೆ.

ಶ್ರೀ ಡಿ. ಎಂ. ಗೋವಿಂದರಾಜು.—493 ಎಕರೆ 3 ಗುಂಟೆ ಮಾತ್ರ ಕೊಟ್ಟು ಬಾಕಿ ಜಮೀನನ್ನು ಸಾಗುವಳಿಗೆ ಕೊಡದೇಯಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಹುಲ್ಲುಗಾವಲಿಗೆಂದು ಮೀಸಲಾಗಿಟ್ಟಿದ್ದಾರೆ.

ಶ್ರೀ ಡಿ. ಎಂ. ಗೋವಿಂದರಾಜು.—ಆ ಜಮೀನನ್ನೂ ಬಡಜನರಿಗೆ, ಜಮೀನಿಲ್ಲದೇಯಿರುವವರಿಗೆ ಸಾಗುವಳಿಗೆ ಕೊಡಲು ಪ್ರಯತ್ನಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಪ್ರದೇಶದ ರೈತರೆಲ್ಲ ಒಪ್ಪಿದರೆ ಯೋಚನೆಮಾಡಬಹುದು.

Transformers manufactured in Government Electric Factory.

Q.—384. **Sri A. BHEEMAPPA NAIK** (Molakalmuru).—

Will the Government be pleased to state :—

(*a*) the number of transformers manufactured in Government Electric Factory ever since it was started ;

(*b*) how many of them are utilised in Mysore State and how many of them are sold outside the State and what is the present stock ?

A.— **Sri H. M. CHANNABASAPPA** (Minister for Industries).—

(*a*) & (*b*) *Vide* statement appended below. Transformers are manufactured only against specific orders and not for stock.